ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 11–09–2018**

## ಪತ್ರಿಕಾ ಆಮಂತ್ರಣ

1. PRESS MEET:

"Mining, Exploration Convention & Trade Show (MINING MAZMA 2018)

Mr. Sunil Duggal, President, Federation of Indian Mineral Industries.

Date: 12-09-2018, Wednesday Time: 12.30 PM
Place: Hotel Chancery Pavilion, Residency Road, Bengaluru.

**ಸಂಖ್ಯೆ: 977/1078**

**ಪತ್ರಿಕಾ ಪ್ರಕಟಣೆ**

# ರಾಜ್ಯದ 86 ತಾಲ್ಲೂಕುಗಳು ಬರಪೀಡಿತ

**–ಸಚಿವ ಆರ್.ವಿ. ದೇಶಪಾಂಡೆ**

ಬೆಂಗಳೂರು, ಸೆ 11 (ಕರ್ನಾಟಕ ವಾರ್ತೆ)

ರಾಜ್ಯದ 16 ಜಿಲ್ಲೆಗಳ 89 ತಾಲ್ಲೂಕುಗಳಲ್ಲಿ ತೀವ್ರ ಮಳೆ ಕೊರತೆ ಉಂಟಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದ 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ರಾಜ್ಯ ಸರ್ಕಾರ ಅಧಿಕೃತವಾಗಿ ಪ್ರಕಟಿಸಿದೆ ಎಂದು ಕಂದಾಯ ಹಾಗೂ ಕೌಶಲಾಭಿವೃದ್ಧಿ ಸಚಿವ ಆರ್.ವಿ. ದೇಶಪಾಂಡೆ ಅವರು ತಿಳಿಸಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವರು ನನ್ನ ನೇತೃತ್ವದಲ್ಲಿ ಇಂದು ಸಚಿವ ಸಂಪುಟದ ಉಪಸಮಿತಿ ಸಭೆ ನಡೆಯಿತು. ಈ ಸಭೆಯಲ್ಲಿ 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ತೀರ್ಮಾನ ಕೈಗೊಳ್ಳಲಾಯಿತು ಎಂದು ಹೇಳಿದರು.

ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಒಂದು ಪ್ರದೇಶದಲ್ಲಿ ಬರಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನಿರ್ಧರಿಸಲು ವಾಡಿಕೆಯ ಕನಿಷ್ಠ ಶೇ 60 ಕ್ಕಿಂತ ಕಡಿಮೆ ಮಳೆ, ಸತತ ಮೂರು ವಾರ ಅಥವಾ

ಅದಕ್ಕಿಂತ ಹೆಚ್ಚಿನ ಅವಧಿಯ ಶುಷ್ಕ ವಾತಾವರಣ, ಕೃಷಿ ಬೆಳೆಯ ವಾಡಿಕೆಯ ಶೇ 75 ಕ್ಕಿಂತ ಕಡಿಮೆ ಬಿತ್ತನೆ, ಉಪಗ್ರಹ ಆಧಾರಿತ ಬೆಳೆ ವಿಶ್ಲೇಷಣೆ ಶೇ 50 ಕ್ಕಿಂತ ತೇವಾಂಶದ ಕೊರತೆ ಗಮನದಲ್ಲಿರಿಸಿಕೊಂಡು 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಸಚಿವ ಸಂಪುಟದ ಉಪ ಸಮಿತಿ ತೀರ್ಮಾನ ಕೈಗೊಂಡಿದೆ ಎಂದರು.

ಮುಂಗಾರು ಜೂನ್ ಮಾಹೆಯಲ್ಲಿ ರಾಜ್ಯವನ್ನು ವ್ಯಾಪಿಸಿಕೊಂಡಿತ್ತು. ಆದರೆ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಮಾತ್ರ ಭಾರಿ ಮಳೆಯಾಗಿ ಅನೇಕ ಪ್ರಮಾಣದ ಆಸ್ತಿಪಾಸ್ತಿ, ಮೂಲ ಸೌಕರ್ಯ ಹಾನಿಯಾಗಿದೆ. ಅಲ್ಲದೆ ಕೆಲವು ಜಿಲ್ಲೆಗಳಲ್ಲಿ ಬರದ ಕರಾಳ ಛಾಯೆ ಕಾಣಿಸಿಕೊಂಡಿದೆ ಎಂದು ಸಚಿವರು ತಿಳಿಸಿದರು.

ಬರಪೀಡಿತ 86 ತಾಲ್ಲೂಕುಗಳಿಗೆ ಪ್ರತಿ ತಾಲ್ಲೂಕಿಗೆ 50 ಲಕ್ಷ ರೂ. ನಂತೆ ಕುಡಿಯುವ ನೀರು ಒದಗಿಸಲು ಶಾಸಕರ ಅಧ್ಯಕ್ಷತೆಯಲ್ಲಿರುವ ಸಮಿತಿ ಸೂಚಿಸುವ ಪ್ರದೇಶಗಳಿಗೆ ಒದಗಿಸುವಂತೆ ಜಿಲ್ಲಾಡಳಿತಕ್ಕೆ ತಿಳಿಸಲಾಗಿದೆ. ಇದಕ್ಕಾಗಿ ಒಟ್ಟು 43 ಕೋಟಿ ರೂ. ಹಣವನ್ನು ಸರ್ಕಾರ ಜಿಲ್ಲಾಡಳಿತಕ್ಕೆ ಬಿಡುಗಡೆ ಮಾಡಲಾಗಿದೆ, ಬರಪೀಡಿತ ತಾಲ್ಲೂಕುಗಳಲ್ಲಿ ಜಾನುವಾರುಗಳಿಗೆ ಮೇವು ಒದಗಿಸಲು ಪಶುಸಂಗೋಪನಾ ಇಲಾಖೆಗೆ 15 ಕೋಟಿ ರೂ. ಹಣ ಬಿಡುಗಡೆ ಮಾಡಲಾಗುವುದು.

ರಾಜ್ಯದಲ್ಲಿ ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದ ಆಗಿರುವ ಸಮಸ್ಯೆಗೆ ಸುಮಾರು 12,000 ಕೋಟಿ ರೂ. ಬಿಡುಗಡೆ ಮಾಡುವಂತೆ ಪ್ರಧಾನ ಮಂತ್ರಿ ಅವರಿಗೆ ಮನವಿ ಮಾಡಲಾಗಿದೆ. ಬೆಳೆ ಹಾನಿ ಕುರಿತಂತೆ ಕೃಷಿ ಮತ್ತು ಕಂದಾಯ ಇಲಾಖೆ ಜಂಟಿ ಸಮೀಕ್ಷೆ ನಡೆಸಿ ಕೇಂದ್ರ ಸರ್ಕಾರಕ್ಕೆ ಪರಿಹಾರ ಕೋರಿ ಮತ್ತೊಂದು ಮನವಿ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಅನಿಲ್ ಮಲ್ಲಿಕ್ ನೇತೃತ್ವದ ಕೇಂದ್ರದ ಒಂದು ತಂಡ ಕೊಡಗು ಜಿಲ್ಲೆಯಲ್ಲಿ ಇದೇ ತಿಂಗಳ 12 ಮತ್ತು 13 ನೇ ತಾರೀಖಿನಂದು ಭೇಟಿನೀಡಿ ಅತಿವೃಷ್ಠಿ ಕುರಿತು ಅಧ್ಯಯನ ನಡೆಸಲಿದೆ. ಭರತಕುಮಾರ್ ನೇತೃತ್ವದ ಮತ್ತೊಂದು ತಂಡ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಭೇಟಿನೀಡಿ ಪರಿಶೀಲನೆ ನಡೆಸಿ ಕೇಂದ್ರ ಸರ್ಕಾರಕ್ಕೆ ವರದಿ ನೀಡಲಿದೆ.

ರಾಜ್ಯದಲ್ಲಿನ ಅತಿವೃಷ್ಠಿ ಮತ್ತು ಅನಾವೃಷ್ಠಿ ಬಗ್ಗೆ ನಿನ್ನೆ ಪ್ರಧಾನ ಮಂತ್ರಿಗಳನ್ನು ಭೇಟಿಮಾಡಿ ಸಂಪೂರ್ಣ ಚಿತ್ರಣವನ್ನು ನೀಡಲಾಗಿದೆ. ಪ್ರಧಾನ ಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದಾಗಿ ಪ್ರಾಣ ಹಾನಿಯಾಗಿರುವ ಬಗ್ಗೆ ನಿಖರ ಮಾಹಿತಿಗಾಗಿ ಪ್ರಾಣ ಹಾನಿಗೆ ಸಂಬಂಧಿಸಿದಂತೆ ಪಟ್ಟಿ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಸಂಖ್ಯೆ

## "ಮೊಲ ಸಾಕಾಣಿಕೆ" ಕುರಿತ ತರಬೇತಿ ಕಾರ್ಯಕ್ರಮ

ಬೆಂಗಳೂರು, ಸೆ 11 (ಕರ್ನಾಟಕ ವಾರ್ತೆ)

ನಗರದ ಹೆಸರಘಟ್ಟದಲ್ಲಿರುವ ಜಾನುವಾರು ಸಂವರ್ಧನಾ ತರಬೇತಿ ಕೇಂದ್ರದಿಂದ ಮೊಲ ಸಾಕಾಣಿಕೆ ಕುರಿತು ಆಸಕ್ತಿಯುಳ ರೈತರಿಗೆ, ರೈತ ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಕ/ಯುವತಿಯರಿಗೆ 3 ದಿನಗಳ "ಮೊಲ ಸಾಕಾಣಿಕೆ" ತರಬೇತಿಯನ್ನು ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ದಿನಾಂಕ: 17–09–2018 ರಿಂದ 19–09–2018 ರವರೆಗೆ ತರಬೇತಿ ನಡೆಯಲಿದ್ದು, ಉಚಿತವಾಗಿ ನೀಡಲಾಗುತ್ತದೆ. ತರಬೇತಿ ಅವಧಿಯಲ್ಲಿ ಊಟ–ಉಪಹಾರದ ವ್ಯವಸ್ಥೆ ಹಾಗೂ ವಸತಿ ಸೌಕರ್ಯಗಳು ಇರುತ್ತವೆ. ಪ್ರಯಾಣದ ವೆಚ್ಚವನ್ನು ಅಭ್ಯರ್ಥಿಗಳೆ ಭರಿಸತಕ್ಕದ್ದು, ತರಬೇತಿ ಪಡೆಯಲಿಚ್ಛಿಸುವವರು ಆನ್‌ಲೈನ್‌ನಲ್ಲಿ "ahvstrg.22web.org" ನಲ್ಲಿ ನೋಂದಣಿ ಮಾಡಿಸಿಕೊಳ್ಳುವುದು.

ಪ್ರಸ್ತುತ ತರಬೇತಿಗೆ ಗರಿಷ್ಠ 100 ಜನರಿಗೆ ಮಾತ್ರ ಮೂಲಭೂತ ಸೌಕರ್ಯಗಳಿರುವುದರಿಂದ, ನೋಂದಣಿಯನ್ನು 100 ಜನರಿಗೆ ಮಿತಿಗೊಳಿಸಲಾಗಿದೆ.

ತರಬೇತಿಗೆ ನೋಂದಣಿ ಮಾಡಿಸಿದವರು ಆಧಾರ್ ಕಾರ್ಡ್‌ನ ಒಂದು ಪ್ರತಿ ಮತ್ತು ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ದಿನಾಂಕ: 17–09–20148 ರಂದು ಬೆಳಿಗ್ಗೆ 9–30 ಗಂಟೆಗೆ ತರಬೇತಿ ಹಾಜರಾಗುವುದು.

ತರಬೇತಿಯು ಹೆಸರಘಟ್ಟದಿಂದ ಸುಮಾರು 4.00 ಕಿಲೋ ಮೀಟರ್ ದೂರದಲ್ಲಿರುವ ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ (ಡ್ಯಾನಿಷ್ ಫಾರಂ) ಇಲ್ಲಿ ನಡೆಯಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

No.

## 'RABIBIT REARING' TRAINING'

Bengaluru, Sept. 11 (Karnataka Information)

A three days 'Rabbit Rearing' Training Programme is organized for interested farmers, farm women and unemployed youth at Livestock Breeding Farm, Hesaraghatta, Bengaluru – 560 089 from 17-09-2018 to 19-09-2018.

Training will be provided at free of vost. There are arrangements of boarding and lodging during the training period.

Trabelling expenses to be borne by the train ees, Those who want to get training, can registr online in the websit “ahvstrg.22web.org”. Pesently as three are infrastructure to train maximum 100 trainees only. registration is restricted to 100 persons. Tose who register for the training programme, have to attend on 17-09-2018 morning at 9-30 AM with 2 recent Passport size photos and a copy of Aadhar Card.

Venue of Tarining : State Livestock Breeding and Training Centre (Danish Farm), which is about at 4.00 KM from Hesaraghatta.

ಸಂಖ್ಯೆ

## ಬೆಳೆ ಸಮೀಕ್ಷೆ ಯೋಜನೆ : ಸಮಿತಿ ರಚನೆಗೆ ಸರ್ಕಾರದ ಅನುಮೋದನೆ

ಬೆಂಗಳೂರು, ಸೆ 11 (ಕರ್ನಾಟಕ ವಾರ್ತೆ)

ಮುಂಗಾರು ಬೆಳೆ 2018 – ಬೆಳೆ ಸಮೀಕ್ಷೆ ಯೋಜನೆಯನ್ನು ಜಿಲ್ಲಾಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಮತ್ತು ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನ ಬಗ್ಗೆ ತಿಳುವಳಿಕೆ ಇರುವ ಯುವಕರ ಸೇವೆಯನ್ನು (ಖಾಸಗಿ ನಿವಾಸಿ) ಬಳಸಿಕೊಳ್ಳುವುದರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ.

ಬೆಳೆ ಸಮೀಕ್ಷೆ ಯೋಜನೆಯಡಿ ಸಂಗ್ರಹವಾಗುವ ಮಾಹಿತಿಯನ್ನು ಹಲವು ಚಟುವಟಿಕೆಗಳಿಗೆ ಬಳಸಿಕೊಳ್ಳಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುವುದು.

ಸಾಂಖ್ಯಿಕ ಇಲಾಖೆ, ಕೃಷಿ ಮತ್ತು ತೋಟಗಾರಿಕೆಗಳ ಬೆಳೆ ವಿಸ್ತೀರ್ಣ ಎಣಿಕಾ ಕಾರ್ಯದಲ್ಲಿ, ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸಹಾಯಧನ ನೀಡಲು, ಬೆಳೆ ವಿಮೆ ಯೋಜನೆಯಡಿ ಪ್ರದೇಶ ಕಡಿತ ಅಂಶವನ್ನು ಅಳವಡಿಸಲು, ಕನಿಷ್ಠ ಬೆಂಬಲ ಬೆಲೆ ನಿಗಧಿಗಾಗಿ. ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಫಲಾನುಭವಿ ಯೋಜನೆಗಳ ಅನುಷ್ಠಾನ ಒಳಗೊಂಡಿದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಮತ್ತು ಇ–ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಸಹ–ಅಧ್ಯಕ್ಷತೆಯಲ್ಲಿ ರಚಿಸಲಾಗುವ ಕಾರ್ಯದರ್ಶಿಗಳ ಸಮಿತಿಯು ಈ ಮಾಹಿತಿಯನ್ನು ಸರ್ಕಾರದ ಇತರೆ ಉದ್ದೇಶಗಳಿಗೆ ಬಳಸುವ ಬಗ್ಗೆ ತೀರ್ಮಾನಿಸಿದಂತೆ ಉಪಯೋಗಿಸಲಾಗುವುದು.

ಪ್ರತಿ ತಾಲ್ಲೂಕಿನ ಬೆಳೆ ಸಂಗ್ರಹಣೆಗೆ ಖಾಸಗಿ ನಿವಾಸಿಗಳಿಗೆ ರೂ 10 ರಂತೆ ಗೌರವಧನ ನೀಡಲು ತೀರ್ಮಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**2018 ರ ಮುಂಗಾರು ಬೆಳೆಯ ಸಮೀಕ್ಷೆ : ಉಸ್ತುವಾರಿ ಸಮಿತಿ ರಚನೆ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಅಧ್ಯಕ್ಷರಾಗಿರುವ ಈ ಸಮಿತಿಯಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ-ಆಸು(ಇ-ಆಡಳಿತ), ಸಹ ಅಧ್ಯಕ್ಷರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿ.ನಿ. ಭೂಮಿ ಮತ್ತು ಯುಪಿಓಆರ್) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರುಗಳು ಇತರ ಸದಸ್ಯರಾಗಿರುತ್ತಾರೆ.

ಸಂಖ್ಯೆ

## ಅರ್ಜಿ ಆಹ್ವಾನ

ಬೆಂಗಳೂರು, ಸೆ 11 (ಕರ್ನಾಟಕ ವಾರ್ತೆ)

ನಗರದ ಹೊಸೂರು ರಸ್ತೆಯಲ್ಲಿರುವ ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆವತಿಯಿಂದ 2018-19ನೇ ಸಾಲಿನ ಎಂ.ಡಿ.ಟಿ.ಎಸ್. ನಲ್ಲಿ ಲಘುವಾಹನ (LMV) ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶಕ್ಕಾಗಿ ಅರ್ಜಿಗಳನ್ನು ದಿನಾಂಕ: 17-09-2018 ರಿಂದ ದಿನಾಂಕ: 10-10-208 ರವರೆಗೆ ವಿತರಿಸಲಾಗುವುದು. ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 15-10-2018 ಅಂತಿಮ ದಿನವಾಗಿರುತ್ತದೆ. ದಿನಾಂಕ: 22-10-2018 ರಂದು ಪ್ರವೇಶಾತಿಗೆ ಸಮಾಲೋಚನೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪ್ರಾಚಾರ್ಯರನ್ನು ದೂರವಾಣಿ ಸಂಖ್ಯೆ 080-26562307 ಅನ್ನು ಸಂಪರ್ಕಿಸಬಹುದಾಗಿದೆ.

ಅಭ್ಯರ್ಥಿಯು ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಲಘುವಾಹನ (LMV)ಚಾಲನೆ ತರಬೇತಿಗೆ ಸೇರಲು ಅಭ್ಯರ್ಥಿಯ ವಯಸ್ಸು 18 ರಿಮದ 40 ವರ್ಷಗಳ ವಯೋಮಿತಿಯೊಳಗಿರಬೇಕು. ಸಂಬಂಧಿಸಿದ ಅಭ್ಯರ್ಥಿಗಳು ಸಂಸ್ಥೆಯ ಪ್ರಾಂಶುಪಾಲರ ಅಧ್ಯಕ್ಷತೆಯನ್ನೊಳಗೊಂಡ ಹಾಗೂ ತರಬೇತಿ ಅಧಿಕಾರಿ ಮತ್ತು ಕಿರಿಯ ತರಬೇತಿ ಅಧಿಕಾರಿಗಳ ಸದಸ್ಯತ್ವದಿಂದ ರಚಿಸಿದ ಸಮಿತಿಯ ಮೂಲಕ ಅಭ್ಯರ್ಥಿಯನ್ನು ನಿಯಮಾನುಸಾರ ಆಯ್ಕೆಮಾಡಲಾಗುವುದು.

ಲಘುವಾಹನ (LMV) ತರಬೇತಿಗೆ ಒಬ್ಬ ಅಭರ್ಥಿಗೆ ತಗಲುವ ಪ್ರವೇಶ ಶುಲ್ಕ ರೂ 1000 (ರೂ. ಒಂದು ಸಾವಿರ ರೂಪಾಯಿಗಳು ಮಾತ್ರ) ಹಾಗೂ ಅರ್ಜಿ ಶುಲ್ಕ ರೂ 50/– (ರೂ. ಐವತ್ತು ರೂಪಾಯಿಗಳು ಮಾತ್ರ) ತರಬೇತಿಯ ಅವಧಿ (ನಾಲ್ಕುವಾರಗಳು – 30 ದಿನಗಳು)

ತರಬೇತಿ ಸಂದರ್ಭದಲ್ಲಿ ಅಭ್ಯರ್ಥಿಯು ತನ್ನ ಸ್ವಂತ ಖರ್ಚಿನಲ್ಲಿ R.T.O. fees (LL&DL) ಅನ್ನು ಭರಿಸತಕ್ಕದ್ದು.